# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1291 |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್, (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 17-12-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>2023-24ರಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಸಂಭವಿಸಿದ ರಸ್ತೆ ಅಪಘಾತಗಳ ಸಂಖ್ಯೆ ಎಷ್ಟು ಮತ್ತು ಜೀವಹಾನಿಯಾದ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲೂಕುವಾರು ವಿವರಗಳನ್ನು ನೀಡುವುದು)</td><td>2023-24ರಿಂದ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯಲ್ಲಿ ಸಂಭವಿಸಿದ ರಸ್ತೆ ಅಪಘಾತಗಳ ವಿವರ ಈ ಕೆಳಕಂಡಂತಿದೆ:
<table>
<tr><th>ವರ್ಷ</th><th>ಮಾರಣಾಂತಿಕ ಅಪಘಾತ</th><th>ಮಾರಣಾಂತಿಕ ವಲ್ಲದ ಅಪಘಾತ</th><th>ಮೃತರ ಸಂಖ್ಯೆ</th><th>ಗಾಯಾಳುಗಳ ಸಂಖ್ಯೆ</th></tr>
<tr><td>2023</td><td>248</td><td>400</td><td>277</td><td>978</td></tr>
<tr><td>2024</td><td>272</td><td>391</td><td>285</td><td>1099</td></tr>
<tr><td>2025</td><td>240</td><td>394</td><td>250</td><td>995</td></tr>
</table></td></tr>
<tr><td>ಆ</td><td>ಕೊಪ್ಪಳ ಜಿಲ್ಲಾ ಕೇಂದ್ರವನ್ನು ತಾಲೂಕುಗಳಿಗೆ ಸಂಪರ್ಕಿಸುವ ಪ್ರಮುಖ ರಸ್ತೆಗಳು ಹದಗೆಟ್ಟಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ (ರಸ್ತೆಗಳ ಪಟ್ಟಿಯನ್ನು ಸಲ್ಲಿಸುವುದು)</td><td>ಕೊಪ್ಪಳ ಜಿಲ್ಲಾ ಕೇಂದ್ರವನ್ನು ತಾಲೂಕುಗಳಿಗೆ ಸಂಪರ್ಕಿಸುವ ಒಟ್ಟು 07 ಪ್ರಮುಖ ರಸ್ತೆಗಳು ಇರುತ್ತವೆ. ಸದರಿ ರಸ್ತೆಗಳ ಪೈಕಿ, 02 ರಸ್ತೆಗಳು ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ ವ್ಯಾಪ್ತಿಗೆ ಒಳಗೊಂಡಿರುತ್ತವೆ. (07 ರಸ್ತೆಗಳ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ).<br><br>ಸದರಿ ಎರಡು (02) ರಸ್ತೆಗಳು ಹದಗೆಟ್ಟಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ವಿವರಗಳು ಕೆಳಗಿನಂತಿರುತ್ತವೆ</td></tr>
<tr><td>ಇ</td><td>ಸದರಿ ಹದಗೆಟ್ಟ ರಸ್ತೆಗಳನ್ನು ಯಾವಾಗ ದುರಸ್ತಿಗೊಳಿಸಲಾಗುವುದು ಅಥವಾ ಪುನರ್ ನಿರ್ಮಾಣ ಕೈಗೊಳ್ಳಲಾಗುವುದು; ಕಾರ್ಯಯೋಜನೆ ಮತ್ತು ಅನುದಾನದ ವಿವರಗಳನ್ನು ನೀಡುವುದು;</td><td>
<table>
<tr><th>ಕ್ರ.ಸಂ</th><th>ಸಂಪರ್ಕಿಸುವ ತಾಲೂಕು</th><th>ರಸ್ತೆಯ ಹೆಸರು</th><th>ರಸ್ತೆ ಉದ್ದ (ಕಿ.ಮೀ ಗಳಲ್ಲಿ)</th><th>ಕೈಗೆತ್ತಿಕೊಂಡ ಕಾಮಗಾರಿಗಳ ವಿವರ</th></tr>
<tr><td>1</td><td>ಕನಕಗಿರಿ</td><td>ಇರಕಲ್ಲಗಡಾ – ಮುಸಲಾಪೂರ ರಸ್ತೆ ರಾಜ್ಯ ಹೆದ್ದಾರಿ-209</td><td>14.00</td><td>ಸದರಿ ರಸ್ತೆಯಲ್ಲಿ ಬಿದ್ದಿರುವ ತಗ್ಗುಗುಂಡಿಗಳನ್ನು ಮುಚ್ಚುವುದು ಪ್ರಸಕ್ತ ಸಾಲಿನ ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಯೋಜನೆಯಲ್ಲಿ ರೂ. 36.50 ಲಕ್ಷಗಳ ಮೊತ್ತದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ರಸ್ತೆಯನ್ನು ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ಸುಸ್ಥಿತಿಯಲ್ಲಿಡಲಾಗಿದೆ.</td></tr>
</table></td></tr>
</table>

<table>
<tr>
<td></td>
<td></td>
<td>
<table>
<tr><td></td><td></td><td></td><td></td><td></td></tr>
<tr><td>2</td><td>ಕುಷ್ಟಗಿ</td><td>ಕೊಪ್ಪಳ–ಕ್ಯಾದಿಗುಪ್ಪ ರಸ್ತೆ (ರಾಜ್ಯ ಹೆದ್ದಾರಿ–36)</td><td>22.00</td><td>ಸದರಿ ರಸ್ತೆಯಲ್ಲಿ ಬಿದ್ದಿರುವ ತಗ್ಗುಗುಂಡಿಗಳನ್ನು ಮುಚ್ಚುವುದು ಪ್ರಸಕ್ತ ಸಾಲಿನ ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ ಯೋಜನೆಯಲ್ಲಿ ರೂ. 20.00 ಲಕ್ಷಗಳ ಮೊತ್ತದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ರಸ್ತೆಯನ್ನು ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ಸುಸ್ಥಿತಿಯಲ್ಲಿಡಲಾಗಿದೆ.</td></tr>
</table>
<br>ಸದರಿ ಹದಗೆಟ್ಟ ರಸ್ತೆಗಳನ್ನು ಈಗಾಗಲೇ 2025–26ನೇ ಸಾಲಿನ 3054 ನಿರ್ವಹಣೆ ಯೋಜನೆಯಡಿಯಲ್ಲಿ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
</td>
</tr>
<tr>
<td>ಈ</td>
<td>ಕೊಪ್ಪಳ ನಗರದ ಹೃದಯ ಭಾಗದಲ್ಲಿ ಇರುವ ಕಿನ್ನಾಳ ರಸ್ತೆ ಮತ್ತು ಕುಷ್ಟಗಿ ಮುಖ್ಯ ರಸ್ತೆಗಳ ಸಂಪೂರ್ಣ ಹದಗೆಟ್ಟ ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟು ಮಾಡುತ್ತಿದ್ದು, ಈ ರಸ್ತೆಗಳ ದುರಸ್ತಿ ಅಥವಾ ಮರು ಡಾಂಬರೀಕರಣವನ್ನು ಸರ್ಕಾರ ಯಾವಾಗ ಕೈಗೊಳ್ಳುತ್ತದೆ? (ವಿವರಗಳನ್ನು ಒದಗಿಸುವುದು)</td>
<td>
• ಕೊಪ್ಪಳದಿಂದ ಕಿನ್ನಾಳ ರಸ್ತೆ ಕಿಮಿ. 1.31 ರಿಂದ 1.65 ರವರೆಗೆ ಸಿ.ಸಿ.ರಸ್ತೆ, ಕಿ.ಮೀ.1.65 ರಿಂದ 4.635 ವರೆಗೆ ಡಾಂಬರೀಕರಣ, ಕಿ.ಮೀ.4.635 ರಿಂದ 4.965 ರವರೆಗೆ ಸಿ.ಸಿ. ರಸ್ತೆ, ಹಾಗೂ ಕಿ.ಮೀ.4.965 ರಿಂದ 8.30 ರವರೆಗೆ ಡಾಂಬರೀಕರಣ ಕಾಮಗಾರಿಯನ್ನು 2022–23ನೇ ಸಾಲಿನ ಲೆಕ್ಕ ಶೀರ್ಷಿಕೆ ಕೆ.ಕೆ.ಆರ್.ಡಿ.ಬಿ. ಯೋಜನೆಯಲ್ಲಿ ರೂ.950 ಲಕ್ಷಗಳಿಗೆ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.<br>
• ಕೊಪ್ಪಳ ಕಿನ್ನಾಳ ರಸ್ತೆ ಕಿಮೀ.0.60 ರಿಂದ 1.31 ರವರೆಗೆ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿಯು 2025–26ನೇ ಸಾಲಿನ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ರೂ.500.00 ಲಕ್ಷಗಳಿಗೆ ಮಂಜೂರಾಗಿದ್ದು, ಅಂದಾಜು ಪತ್ರಿಕೆ ತಯಾರಿಸುವ ಕೆಲಸ ಪ್ರಗತಿಯಲ್ಲಿದೆ.<br>
• ಕುಷ್ಟಗಿ ಮುಖ್ಯ ರಸ್ತೆಯ ಕಾಮಗಾರಿಯನ್ನು ಪ್ರಸಕ್ತ ಸಾಲಿನ 3054 ರಾಜ್ಯ ಹೆದ್ದಾರಿ ನಿರ್ವಹಣೆ ಅಡಿಯಲ್ಲಿ ಕೈಗೆತ್ತಿಕೊಂಡಿದ್ದು, ರಸ್ತೆ ನಿರ್ವಹಣೆ ಹಾಗೂ ಪಾಟ್‌ಹೋಲ್ ತುಂಬುವ ಕೆಲಸ ಪ್ರಗತಿಯಲ್ಲಿದೆ.
</td>
</tr>
</table>

ಕಡತ ಸಂಖ್ಯೆ: ಲೋಇ 480 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

# ಅನುಬಂಧ-1

## ಕೊಪ್ಪಳ ಜಿಲ್ಲಾ ಕೇಂದ್ರದಿಂದ ತಾಲೂಕುಗಳಿಗೆ ಸಂಪರ್ಕಿಸುವ ಪ್ರಮುಖ ರಸ್ತೆಗಳ ವಿವರ

| ಕ್ರ.ಸಂ | ತಾಲೂಕು | ರಸ್ತೆಯ ಹೆಸರು | ಸಂಬಂಧಿಸಿದ ಇಲಾಖೆ | ರಸ್ತೆ ಉದ್ದ (ಕಿಮೀ ಗಳಲಿ) | ರಸ್ತೆಯ ಸ್ಥಿತಿ | ಕೈಗೆತ್ತಿಕೊಂಡ ಕಾಮಗಾರಿಗಳ ವಿವರ |
|---|---|---|---|---|---|---|
| 1 | 2 | 3 | | 4 | 5 | 6 |
| 1 | ಕನಕಗಿರಿ | ಇರಕಲ್ಲಗಡಾ - ಮುಸಲಾಪೂರ ರಸ್ತೆ ರಾಜ್ಯ ಹೆದ್ದಾರಿ-209 | ಲೋ.ಇ | 14.00 | ರಸ್ತೆಯಲ್ಲಿ ಪಾಟ್ ಹೋಲಗಳು ಬಿದ್ದಿರುತ್ತವೆ | ಸದರಿ ರಸ್ತೆಯಲ್ಲಿ ಬಿದ್ದಿರುವ ತಗ್ಗುಗುಂಡಿಗಳನ್ನು ಮುಚ್ಚುವುದು ಹಾಗೂ ಇತರೆ ರಸ್ತೆ ನಿರ್ವಹಣೆ ಕಾಮಗಾರಿಗಳನ್ನು ಪ್ರಸಕ್ತ ಸಾಲಿನ ನಿರ್ವಹಣೆ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ರಸ್ತೆಯನ್ನು ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ಸುಸ್ಥಿತಿಯಲ್ಲಿಡಲಾಗಿದೆ. |
| 2 | ಕುಷ್ಟಗಿ | ಕೊಪ್ಪಳ-ಕ್ಯಾದಿಗುಪ್ಪ ರಸ್ತೆ (ರಾಜ್ಯ ಹೆದ್ದಾರಿ-36) | ಲೋ.ಇ | 22.00 | ಸುಸ್ಥಿತಿಯಲ್ಲಿದೆ | ಸದರಿ ರಸ್ತೆಯಲ್ಲಿ ಬಿದ್ದಿರುವ ತಗ್ಗುಗುಂಡಿಗಳನ್ನು ಮುಚ್ಚುವುದು ಹಾಗೂ ಇತರೆ ರಸ್ತೆ ನಿರ್ವಹಣೆ ಕಾಮಗಾರಿಗಳನ್ನು ಪ್ರಸಕ್ತ ಸಾಲಿನ ನಿರ್ವಹಣೆ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ರಸ್ತೆಯನ್ನು ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ಸುಸ್ಥಿತಿಯಲ್ಲಿಡಲಾಗಿದೆ. |
| 3 | ಯಲಬುರ್ಗಾ | ಕೊಪ್ಪಳದಿಂದ ಬಾನಾಪುರ ಎನ್.ಹೆಚ್-67 ಹಾಗೂ ಬಾನಾಪುರ-ಕುಕನೂರ-ಯಲಬುರ್ಗಾ ಎನ್.ಹೆಚ್-367 ಜಿಲ್ಲಾ ಕೇಂದ್ರದಿಂದ ತಾಲೂಕು ಕೇಂದ್ರಕ್ಕೆ ರಾಷ್ಟ್ರೀಯ ಹೆದ್ದಾರಿಯ ಸಂಪರ್ಕ ಹೊಂದಿರುತ್ತದೆ. | ರಾಷ್ಟ್ರೀಯ ಹೆದ್ದಾರಿ ಇಲಾಖೆ | 45.00 | ಸುಸ್ಥಿತಿಯಲ್ಲಿದೆ | ರಾಷ್ಟ್ರೀಯ ಹೆದ್ದಾರಿ ಇಲಾಖೆಗೆ ಸಂಬಂಧಿಸಿರುತ್ತದೆ. |
| 4 | ಕುಕನೂರ | ಕೊಪ್ಪಳದಿಂದ ಬಾನಾಪುರ ಎನ್.ಹೆಚ್-67 ಹಾಗೂ ಬಾನಾಪುರ-ಕುಕನೂರ-ಯಲಬುರ್ಗಾ ಎನ್.ಹೆಚ್-367 ಜಿಲ್ಲಾ ಕೇಂದ್ರದಿಂದ ತಾಲೂಕು ಕೇಂದ್ರಕ್ಕೆ ರಾಷ್ಟ್ರೀಯ ಹೆದ್ದಾರಿಯ ಸಂಪರ್ಕ ಹೊಂದಿರುತ್ತದೆ. | ರಾಷ್ಟ್ರೀಯ ಹೆದ್ದಾರಿ ಇಲಾಖೆ | 30.00 | ಸುಸ್ಥಿತಿಯಲ್ಲಿದೆ | ರಾಷ್ಟ್ರೀಯ ಹೆದ್ದಾರಿ ಇಲಾಖೆಗೆ ಸಂಬಂಧಿಸಿರುತ್ತದೆ. |
| 5 | ಗಂಗಾವತಿ | ಕಲ್ಮಲಾ-ಶಿಗ್ಗಾಂವ್ ರಾಜ್ಯ ಹೆದ್ದಾರಿ-23 | ಕೆ.ಆರ್.ಡಿ.ಸಿ.ಎಲ್. | 49.30 | ಸುಸ್ಥಿತಿಯಲ್ಲಿದೆ | ಕೆ.ಆರ್.ಡಿ.ಸಿ.ಎಲ್. ಗೆ ಹಸ್ತಾಂತರಿಸಲಾಗಿದ್ದು, ರಸ್ತೆ ಸುಸ್ಥಿತಿಯಲ್ಲಿದೆ. |
| 6 | ಕನಕಗಿರಿ | ರಾರಾವಿ-ಬೇಲೂರು ರಾಜ್ಯ ಹೆದ್ದಾರಿ-63 | ಎಸ್.ಹೆಚ್.ಡಿ.ಪಿ | 39.39 | ಸುಸ್ಥಿತಿಯಲ್ಲಿದೆ | ಎಸ್.ಹೆಚ್.ಡಿ.ಪಿ ಹಂತ-5ರಲ್ಲಿ ರೂ. 2000.00 ಲಕ್ಷಗಳಿಗೆ ತೆಗೆದುಕೊಳ್ಳಲು ಪ್ರಸ್ತಾವನೆ ಸಲ್ಲಿಸಿದೆ |
| 7 | ಕಾರಟಗಿ | ರಾರಾವಿ-ಬೇಲೂರು ರಾಜ್ಯ ಹೆದ್ದಾರಿ-63 | ಕೆ.ಆರ್.ಡಿ.ಸಿ.ಎಲ್. | 16.40 | ಸುಸ್ಥಿತಿಯಲ್ಲಿದೆ | ಕೆ.ಆರ್.ಡಿ.ಸಿ.ಎಲ್. ಗೆ ಹಸ್ತಾಂತರಿಸಲಾಗಿದ್ದು, ರಸ್ತೆ ಸುಸ್ಥಿತಿಯಲ್ಲಿದೆ. |